# ಮಾತು ಮೌನ

ನಮ್ಮ ದಿನನಿತ್ಯದ ಜೀವನದಲ್ಲಿ ಮಾತಿಗೆ ಕೊಟ್ಟಿರುವ ಪ್ರಾಮುಖ್ಯತೆ ಮತ್ತು ಆದ್ಯತೆ 'ಮೌನ'ಕ್ಕೆ ನೀಡಿಲ್ಲ. ನಮಗೆ 'ಮಾತು' ಬಲು ಪ್ರಿಯ. ಆದರೆ, 'ಮೌನ' ದೂರ. ಮಾತು ನಮ್ಮನ್ನು ಬಳಲಿಸುತ್ತದೆ; ಮೌನ ನಮಗೆ ಬಲಕೊಡುತ್ತದೆ. 'ಗುರೋಸ್ತು ಮೌನವ್ಯಾಖ್ಯಾನಂ; ಶಿಷ್ಯಾಸ್ತು ಛಿನ್ನಸಂಶಯಾಃ' ಎಂಬ ಪ್ರಾಚೀನವಾದ ಮಾತೊಂದುಂಟು. ಗುರು ಮೌನದಿಂದಲೇ ಶಿಷ್ಯನಿಗೆ ಹೇಳುತ್ತಾನೆ. ಶಿಷ್ಯನಿಗೂ ಇರುವ ಸಂಶಯಗಳೆಲ್ಲಾ ಇಲ್ಲವಾಗುತ್ತವೆ. ಇದು ಗುರು–ಶಿಷ್ಯ ಪರಂಪರೆಯ 'ಮೌನ'ದ ವ್ಯಾಖ್ಯಾನ. ಇದೇ ಸಂಗತಿಯನ್ನು ನೆನಪಿಸುವ ಝೆನ್ ಕತೆಗಳು ಹಲವುಂಟು. ಅಲ್ಲಿ ಮೌನಧ್ಯಾನ ಅಥವಾ ಧ್ಯಾನಮೌನ ಅನುಲೋಮ – ವಿಲೋಮವಾಗಿ ಬರುವುದುಂಟು. ಝೆನ್ ಗುರು 'ಮೌನ'ದಲ್ಲಿಯೇ ಸಮಸ್ತವನ್ನು ಹೇಳಿ ಬಿಡುತ್ತಾನೆ. ಮಾತಿನ ಹಳವಂಡದಲ್ಲಿ ಬಿದ್ದು ನಾರುತ್ತಿರುವ ನಮಗೆ 'ಮೌನ'ದ ದೈವೀಶಕ್ತಿಯ ಅರ್ಥವಾಗುವುದಾದರೂ ಹೇಗೆ? ಮಾತು–ಮಂತ್ರವಾಗಿ ಪ್ರತಿಫಲಗೊಳ್ಳುವುದು ಬೇರೆ ಮಾತು. ಆದರೆ, ಮಾತು–ಮಾತೆಯಾಗಿ ಬರದೆ ಹೋದರೆ; ಮಾತಿಗೆ ಬೆಲೆ ಎಲ್ಲಿ ಬಂದೀತು? 'ಮಾತು' ಲೋಕದ ಬೀದಿಬದಿಯ ವ್ಯರ್ಥ ಮಾತಾಗಿ ಪರಿಣಮಿಸಕೂಡದು. ಅದು ಬೆಳಕಿನ ಪ್ರವಾಹ ಆಗಬೇಕು. ಆದರೆ, ದುರ್ದೈವದ ಸಂಗತಿಯೆಂದರೆ ಮಾತು ಕಪಟ, ಮೋಸ, ವಂಚನೆಗಳ ಸಾಧನವಾಗುತ್ತಿದೆ. ಅಲ್ಲಮಪ್ರಭು 'ಮಾತೆಂಬುದು ಜ್ಯೋತಿರ್ಲಿಂಗ' ಎಂದು ಹೇಳಿದ. ಅದು ಅನುಭವದ ಸಾಧನೆಯ ಸ್ವತ್ತು. ಮಾತು ಅಂತರಂಗದಲ್ಲಿ ಉಳಿಯಬೇಕು. ಅದು ಮೌನದ ಕ್ರಿಯೆಯಲ್ಲಿ ಕರಗಿಹೋಗಬೇಕು. ಹೀಗಾದಾಗ ಮಾತ್ರ ಮಾತಿಗೆ ಬೆಲೆ ಅಥವಾ ಮೌಲ್ಯ ಬಂದೀತು. ಮಾತು–ಮೌನ ಇವೆರಡರ ನಡುವಣ ಸಂಧಿರಹಸ್ಯವನ್ನು ಎರಡು ಪ್ರಸಂಗಗಳ ಮೂಲಕ ನಾವು ತಿಳಿಯಬಹುದು. ನಾವು ಮೊದಲು ಬುದ್ಧನ ಬಳಿಗೆ ಹೋಗೋಣ. ಒಮ್ಮೆ ಆನಂದ ತಥಾಗತನಾದ ಬುದ್ಧನಿಗೆ ಹೇಳಿದ. 'ಭಗವಾನ್, ಒಂದು ಹುಣ್ಣಿಮೆ ಕಳೆದು ಮತ್ತೊಂದು ಹುಣ್ಣಿಮೆ ಬಂದಿತು. ಹಲವು ಜನ ಭಿಕ್ಕುಗಳಿಗೆ ಮೌನದ ಬಗೆಗೆ ಅದೆಷ್ಟೋ ಸಲ ನೀನು ಹೇಳಿದ್ದಿ. ನಾನೂ ನಿನ್ನ ಜತೆ ಇದ್ದವನೆ? ಅದೆಲ್ಲವನ್ನು ಕೇಳಿದ್ದೇನೆ. ಆದರೆ, ನನಗೆ 'ಮೌನ' ಎಂದರೆ ಏನೆಂದೇ ತಿಳಿದಿಲ್ಲ. ದಯವಿಟ್ಟು ಅದು ನನಗೆ ಚೆನ್ನಾಗಿ ತಿಳಿಯುವಂತೆ ಹೇಳಬಾರದೆ?' ಎಂದು ವಿನಂತಿಸಿಕೊಂಡ. ಆಗ ಬುದ್ಧ 'ಸರಿ, ನೀನು ಹೇಳಿದ್ದು ತಿಳಿಯಿತು. ಹೌದು ನಿನಗೆ ತಿಳಿಯುವ ಹಾಗೆಯೇ ಹೇಳಲು ಪ್ರಯತ್ನಿಸುತ್ತೇನೆ' ಎಂದು ಹೇಳಿದ. ಅನಂತರ ತಥಾಗತನು ಪದ್ಮಾಸನ ಹಾಕಿಕೊಂಡು ಸುಮ್ಮನೆ ಕುಳಿತುಕೊಂಡ. ಆನಂದ ಅವನ ಎದುರು ಸುಮ್ಮನೆ ಇದ್ದ. ಮೊದಲದಿನ ಕಳೆಯಿತು. ಎರಡನೆಯ ದಿನ ಕಳೆಯಿತು. ಮೂರನೆಯ ದಿನವೂ ಕಳೆಯಿತು. ಆ ದಿನ ಸಂಜೆಯ ಹೊತ್ತಿನಲ್ಲಿ ಆನಂದ ತನ್ನ ಕಣ್ಣನ್ನು ತೆರೆದು ತಥಾಗತನನ್ನು ನೋಡಿದ. ಆಗ ಬುದ್ಧನ ಮುಖದಲ್ಲಿ ಸ್ಮರಣೀಯವಾದ ಮುಗುಳ್ನಗೆ ಸುಳಿದು ಹೋಯಿತು. ಆಗ ಆನಂದ 'ಭಂತೇ ಮೌನ ಅಂದರೇನು ನನಗೆ ತಿಳಿಯಿತು' ಎಂದು ಹೇಳಿದ. ಆಗ ತಥಾಗತ 'ನಾನು ತಿಳಿಯುವ ಹಾಗೆ ನಿನಗೆ ಹೇಳಿದೆ' ಎಂದು ಮುಗುಳುನಗೆಯನ್ನು ಅರಳಿಸಿದ. ಈ ಮಾತಿನಲ್ಲೊಂದು ಸ್ವಾರಸ್ಯ ಉಂಟು. ಮೌನದ ಅರ್ಥವಾಗಬೇಕಾದರೆ, ಮಾತಿನ ವ್ಯರ್ಥತೆಯ ಅರಿವಾಗಬೇಕು.

ಈ ಮೇಲಿನದು ಬುದ್ಧನ ಕಾಲದಲ್ಲಿ ನಡೆದ ಪ್ರಸಂಗ. ಇನ್ನೊಂದು ನಮ್ಮ ಕಾಲದ್ದು. ಸ್ನೇಹಿತರೊಬ್ಬರು ತಮ್ಮ ಗೆಳೆಯರೊಬ್ಬರ ಮನೆಗೆ ಹೋದರು. ಅವರಿಬ್ಬರೂ ನೋಡದೆ ಬಹಳ ದಿನಗಳಾಗಿತ್ತು. ಪರಸ್ಪರ ಮಾತಿಗೆ ಹಚ್ಚಿಕೊಂಡರು. ಅತಿಥಿಯಾಗಿ ಬಂದ ಗೆಳೆಯರು ಮಾತನಾಡುತ್ತಲೇ ಇದ್ದರು. ಪಾಪ ಮನೆಯ ವ್ಯಕ್ತಿ ಎಲ್ಲ ಮಾತಿಗೂ ತಲೆಯಾಡಿಸುವುದೇ ಬಂತು. ಹಳೆಯ ಹತ್ತಾರು ಸಂಗತಿಗಳು ಮಾತಿನ ನಡುವೆ ಬಂದು ಹೋದವು. ಬಂದ ಗೆಳೆಯರು ತುಂಬಾ ಮಾತನಾಡುತ್ತಲೇ ಇದ್ದರು. ಊಟದ ಸಮಯದಲ್ಲೂ ಮಾತೇ ಮಾತು. ಗೆಳೆಯರ ಮಾತಿಗೆ ವಿರಾಮವೇ ಇಲ್ಲ. ಊಟವೇನೊ ಮುಗಿಯಿತು. ರಾತ್ರಿ ಕಳೆಯುತ್ತಿದೆ. ಗೆಳೆಯರು ತಮ್ಮ ಮಾತಿಗೆ ಕಡಿವಾಣ ಹಾಕುತ್ತಿಲ್ಲ. ಆತ ಮಲಗುವ ಕಾಲಕ್ಕೆ 'ನಾಳೆ ನನ್ನದು ಮೌನದ ದಿನ. ಕಳೆದ ಹನ್ನೆರಡು ವರ್ಷಗಳಿಂದ ಬಿಡದೆ ಆಚರಿಸುತ್ತ ಬಂದಿದ್ದೇನೆ. ಅದರ ಸಿದ್ಧಿಯ ಬಗೆಗೆ ಅನಂತರ ಹೇಳುತ್ತೇನೆ. ನಾಳೆ ಬೆಳಿಗ್ಗೆ ನಾನು ಮಲಗುವ ಮಂಚದ ಬಳಿ ಹಲಗೆ ಬಳಪ ಇಟ್ಟು ಬಿಡು. ನಾನು ಹೇಳಬೇಕಾದ್ದನ್ನೆಲ್ಲಾ ಬರೆದು ತಿಳಿಸುತ್ತೇನೆ. ನೀನು ನನಗೆ ಹೇಳಬೇಕಾದ್ದನ್ನು ಹೇಳಿದರೆ ಸಾಕು. ನಾಳೆ ಸೂರ್ಯ ಹುಟ್ಟಿದ ದಿನದಿಂದ ಮಾರನೆಯ ದಿನ ಸೂರ್ಯೋದಯದ ವರೆಗೂ ನಾನು ಮಾತನಾಡುವುದಿಲ್ಲ. ನಿನಗೆ ತೊಂದರೆ ಇಲ್ಲ ತಾನೆ?' ಹೀಗೆಂದು ಹೇಳಿ ಗೆಳೆಯ ಮಲಗಿಕೊಂಡನು. ಮನೆಯ ಯಜಮಾನನೂ ಮಲಗಿದ. ಬೆಳಿಗ್ಗೆ ಸೂರ್ಯೋದಯ ಆಯಿತು. ಮನೆಯ ಯಜಮಾನ ಗೆಳೆಯನ ಮಂಚದ ಬಳಿ ಹೋದ. ತಲೆದಿಂಬಿನ ಹತ್ತಿರವಿದ್ದ ಗಂಟೆ ಬಡಿಯಿತು. ಹಲಗೆಯಲ್ಲಿ 'ನಾನು ಮಂಚದಲ್ಲಿಯೇ ಕಾಫಿ ಕುಡಿಯುವ ಅಭ್ಯಾಸವುಂಟು. ಇಲ್ಲಿಗೆ ಕಾಫಿ ಬರಲಿ ಬಿಸಿಬಿಸಿ ಕಾಫಿ ಬೇಕು' ಅದರಂತೆಯೇ ವ್ಯವಸ್ಥೆಯೂ ಆಯಿತು. ಗೆಳೆಯರು ರಾತ್ರಿ ಮಲಗುವವರೆಗೂ ಇಂತಹ ಉಪದ್ವ್ಯಾಪ ಇದ್ದೇ ಇತ್ತು. ಇದು ಮೌನದ ಇನ್ನೊಂದು ಮುಖ. ಇಂತಹ ಮೌನವೇ ಈಗ ಹೆಚ್ಚು ಪ್ರಚಲಿತ. ಇಂತಹ ಮೌನ ತನಗೂ ಸುಖ ತರುವುದಿಲ್ಲ; ಇತರರಿಗೂ ಹಿಗ್ಗು ತರುವುದಿಲ್ಲ. ನಾವು ಇದನ್ನು ಮೌನದ ಮುಖವಾಡದಲ್ಲಿರುವ ಮಾತೆಂದು ಹೇಳಬೇಕು ಅಷ್ಟೆ. ಮೌನವು ಒಂದು ಅಂತರಂಗದ ಅಗತ್ಯ ಎಂಬ ತಿಳಿವಳಿಕೆ ಬಂದಾಗ ಮಾತಿಗೆ ಕಡಿವಾಣ ಬಿದ್ದು 'ಮೌನ'ಕ್ಕೆ ಬೆಲೆ ಬರುತ್ತದೆ.

ಮೌನದ ನಿಜಾರ್ಥ ಅರ್ಥವಾಗಬೇಕಾದರೆ, ಮೊದಲು ಮಾತಿನ ವ್ಯರ್ಥತೆಯ ಅರಿವಾಗಬೇಕು. ಮಾತು ಅರ್ಥವತ್ತಾಗಿದ್ದರೆ, ಅದು ತನ್ನ ಶಕ್ತಿಯನ್ನು ಉಳಿಸಿಕೊಂಡಿದ್ದರೆ; ಮೌನದ ಅಗತ್ಯ ಇರುತ್ತಿರಲಿಲ್ಲವೇನೊ? ಸ್ವಲ್ಪ ಯೋಚಿಸಿ ನೋಡಿದರೆ, ಮಾತೇ ಮೌನವನ್ನು ಸೃಷ್ಟಿಸಿರಬೇಕು. ಪ್ರಾಚೀನ ಕಾಲಶಾಸ್ತ್ರಕ್ಕೆ ಸೇರಿದ 'ವಿದ್ಯಾತಂತ್ರ' ಎಂಬ ಗ್ರಂಥದಲ್ಲಿ 'ಇಷ್ಟೊಂದು ಸತ್ವಶಾಲಿಯಾಗಿರುವ ಮೌನವನ್ನು ನಾನೇ ಸೃಷ್ಟಿಸಿದೆ' ಎಂಬ ಮಾತು ಬಂದಿದೆ. ಇದು ಮೌನದ ಪ್ರಾಚೀನ ವ್ಯಾಖ್ಯಾನ. ಆದರೆ, ನಾವು 'ಮೌನ'ದ ಮೌಲ್ಯವನ್ನು ಮರೆತು ಮಾತಿನ ಆಡಂಬರದಲ್ಲಿ ಉಳಿದು ಬಿಟ್ಟಿದ್ದೇವೆ.

■ ಪುರಂಜೀವಿ

## ಮಾತೇ ಮುತ್ತು

- ಸೋಮಾರಿಗಳಿಗೆ ಮಾತ್ರ ತಮ್ಮ ಭವಿಷ್ಯದಲ್ಲಿ ನಂಬಿಕೆ ಇರುವುದಿಲ್ಲ.
  —ಹೆನ್ರಿ
- ಇತಿಹಾಸವು ಪಾತಕಗಳ ಮತ್ತು ದುರ್ದೈವೀ ಘಟನೆಗಳ ಚಿತ್ರಣ.
  —ವಾಲ್ಟೇರ್
- ಒಬ್ಬ ವ್ಯಕ್ತಿಯಲ್ಲಿರುವ ಉತ್ಸಾಹವೇ ಅವನ ಆಸ್ತಿ.
  —ತಿರುವಳ್ಳುವರ್
- ದಾನದಿಂದ, ತ್ಯಾಗದಿಂದ ದೊರಕುವ ಆನಂದವು ಅವರ್ಣನೀಯ. ಅದನ್ನು ನಮ್ಮಿಂದ ಯಾರೂ ಕಿತ್ತುಕೊಳ್ಳಲಾರರು.
  —ಸ್ವಾಮಿ ವಿವೇಕಾನಂದ
- ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು. ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ.
  —ಕುವೆಂಪು
- ಪ್ರಕಟಣೆಗಾಗಿ ಹಂಬಲಿಸುವ ಅನುಭವಗಳ ಆಕಾಂಕ್ಷೆಯೇ ಕಲೆಯ ಸೃಷ್ಟಿಗೆ ಕಾರಣವಾಗುತ್ತದೆ.
  —ಶಿವರಾಮ ಕಾರಂತ
- ಆಶೆ ಯಾವಾಗಲೂ ನಿರಾಶೆಗಿಂತ ಲೇಸು.
  —ಗಯಟೆ
- ಬೇರೆ ಎಲ್ಲದಕ್ಕಿಂತಲೂ ಕಾಲವೇ ಮಾನವನಿಗೆ ಪ್ರಾಪ್ತಿಸುವ ಶ್ರೇಷ್ಠ ಬೋಧಕ.
  —ಎಡ್ಮಂಡ್ ಬರ್ಕ್